ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 688/2022**

**Incamera Evidence**

**ಫ್ರಾಸಾ- 2 ಚಾಸಾ- 2**

ಸಾಕ್ಷಿದಾರರ ಹೆಸರುಃ : ಸಂತ್ರಸ್ಥೆ

ತಂದೆಯ ಹೆಸರುಃ : -

ವಯಸ್ಸುಃ : -

ಉದ್ಯೋಗಃ : -

ವಾಸ : ಕೊಟ್ಟಿಗೇರಹಳ್ಳಿ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 25-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಚಾಸಾ-1 ನನ್ನ ಮಾವ, ಚಾಸಾ-3 ಮತ್ತು 4 ನನ್ನ ತಂದೆ ತಾಯಿ. ಕಾ.ಸಂ.ಒ.ಬಾಲಕನ ಪರಿಚಯ ಈಗ ಇದೆ, ಹಿಂದೆ ಇರಲಿಲ್ಲ.

2.2020ರಲ್ಲಿ ನಾನು ಕೊಟ್ಟಿಗೇರಹಳ್ಳಿಯಲ್ಲಿ ನನ್ನ ತಂದೆ ಮನೆಯಲ್ಲಿದ್ದೆನು. 2020ರಲ್ಲಿ ನಾನು ಚಾಸಾ-1ರವರ ಮನೆಗೆ ಹೋಗಿದ್ದೆನು. ಅಲ್ಲಿಂದ ನನ್ನ ಚಿಕ್ಕಪ್ಪನ ಮನೆಗೆ ಹೋದೆನು. ಅಲ್ಲಿಂದ ನಾನು ಕಳ್ಳಂಬೆಳ್ಳದ ನನ್ನ ಚಿಕ್ಕಮ್ಮಳ ಮನೆಗೆ ಹೋದೆನು. ಯಾಕೆಂದರೆ ನಾನು ಚಾಸಾ-1 ರವರ ಹೆಂಡತಿ ಜೊತೆ ಜಗಳ ಮಾಡಿಕೊಂಡು ಹೋದೆನು. ಆ ವಿಚಾರ ನನ್ನ ತಂದೆ ಮತ್ತು ಮಾವನಿಗೆ ಗೊತ್ತಿರಲಿಲ್ಲ. ಯಾಕೆಂದರೆ ನನ್ನ ಚಿಕ್ಕಮ್ಮನ ಬಳಿ ಫೋನ್ ಇರಲಿಲ್ಲ, ನನ್ನ ಬಳಿಯೂ ಇರಲಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಕಾ.ಸಂ.ಒ.ಬಾಲಕ ಮತ್ತು ಆತನ ಸ್ನೇಹಿತರು ಸೇರಿ ನನ್ನನ್ನು ಅಪಹರಿಸಿಕೊಂಡು ಹೋಗಿ ನನ್ನನ್ನು ಆತನ ಜೊತೆ ಬಲವಂತವಾಗಿ ಮದುವೆ ಮಾಡಿಸಿರುತ್ತಾರೆ ನಂತರ ಆತನು ನನ್ನನ್ನು ಆತನ ಚಿಕ್ಕಮ್ಮನ ಮನೆಗೆ ಕರೆದುಕೊಂಡು ಹೋಗಿ ನನ್ನ

ಜೊತೆ ದಿನನಿತ್ಯ ದೈಹಿಕ ಸಂಪರ್ಕ ಬೆಳೆಸಿರುತ್ತಾನೆಂದು ಹೇಳಿಕೆ ನೀಡಿಲ್ಲ.

3.ಚಾಸಾ-1 ರವರು ನಾನು ಕಾಣೆಯಾಗಿದ್ದೇನೆಂದು ದೂರು ಕೊಟ್ಟಿದ್ದರು. ಆಗ ನನ್ನ ಚಿಕ್ಕಮ್ಮ ನನ್ನನ್ನು ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದರು. ಪೊಲೀಸರು ನನ್ನನ್ನು ಅಲ್ಲಿಂದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನನ್ನನ್ನು ವೈದ್ಯರು ಪರೀಕ್ಷೆ ಮಾಡಿಲ್ಲ. ಅಲ್ಲಿ ವೈದ್ಯರು ಸಹಿ ಪಡೆದುಕೊಂಡರು, ಏತಕ್ಕೆಂದು ಗೊತ್ತಿಲ್ಲ. ನನ್ನ ಜೊತೆ ನನ್ನ ತಾಯಿ ಕೂಡ ಇದ್ದರು. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ದಾಖಲೆಯನ್ನು ನಿಪಿ-6 ಎಂದು ಸಾಕ್ಷಿಯರುಜುವನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

4.ಈಗ ತೋರಿಸಿದ 2 ದಾಖಲೆಗಳಲ್ಲಿ ನನ್ನ ರುಜು ಇರುತ್ತದೆ. ಅವುಗಳನ್ನು **ನಿಪಿ-7 ಮತ್ತು 8** ಎಂದು ಸಾಕ್ಷಿಯ ರುಜುಗಳನ್ನು **ನಿಪಿ-7(ಎ) ಮತ್ತು 8(ಎ)** ಎಂದು ಗುರುತಿಸಲಾಯಿತು. ಈ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನನ್ನು ಪೊಲೀಸರು ಯಲ್ಲಮ್ಮ ದೇವಸ್ಥಾನ ಅಥವಾ ಸಿದ್ದಮ್ಮಳ ಮನೆ ಬಳಿ ಕರೆಸಿಲ್ಲ ಹಾಗೂ ಅಲ್ಲಿ ನನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಅವುಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಪೊಲೀಸರು ಸಹಿ ಹಾಕಲು ಹೇಳಿದ ಕಾರಣ ಸಹಿ ಹಾಕಿರುತ್ತೇನೆ. ಈಗ ತೋರಿಸಿದ 2 ಫೋಟೋಗಳಲ್ಲಿ ನಾನು ಇದ್ದೇನೆ. ಸದರಿ ಫೋಟೋಗಳನ್ನು ಎಲ್ಲಿ ತೆಗೆದಿದ್ದೆಂದು ಗೊತ್ತಿಲ್ಲ. ಅದರಲ್ಲಿ ಕಂಡುಬರುತ್ತಿರುವುದು ಯಲ್ಲಮ್ಮ ದೇವಸ್ಥಾನ ಮತ್ತು ಸಿದ್ದಮ್ಮಳ ಮನೆಯಾ ಎಂದರೆ ನನಗೆ ಗೊತ್ತಿಲ್ಲ. ಈ ಫೋಟೋಗಳನ್ನು **ನಿಪಿ-9 ಮತ್ತು 10** ಎಂದು ಗುರುತಿಸಲಾಯಿತು.

5.ಪೊಲೀಸರು ನನ್ನನ್ನು ಅರಸೀಕೆರೆ ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಪೊಲೀಸರು ಹೇಳಿಕೊಟ್ಟದ್ದನ್ನು ಹೇಳಿರುತ್ತೇನೆ. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಈ ಹೇಳಿಕೆಯನ್ನು ನ್ಯಾಯಾಧೀಶರ ಮುಂದೆ ನೀಡಿರುತ್ತೇನೆ. ಇದನ್ನು **ನಿಪಿ-11** ಎಂದು ಸಾಕ್ಷಿ ಗುರುತಿಸಿದ ರುಜುವನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಅದನ್ನು **ನಿಪಿ-12** ಎಂದು ಸಾಕ್ಷಿಯ ರುಜುವನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಪೊಲೀಸರು ಸಹಿ ಹಾಕಲು ಹೇಳಿದ ಕಾರಣ ಹಾಕಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿನಾಂಕ 2020ರಲ್ಲಿ ಹಿರಿಯೂರಿನ ಬಸವರಾಜ ಟ್ರಸ್ಟ್ ನಲ್ಲಿ ಎಸ್ ಎಸಿ ಎಲ್ ಸಿ ಓದುತ್ತಿದ್ದೆನು, ಆಗ ನ್ಯಾಯಾಲಯದ ಮುಂದಿರುವ ಕಾ.ಸಂ.ಒ.ಬಾಲಕನ ಪರಿಚಯವಾಗಿತ್ತು ಎಂದರೆ ಸರಿಯಲ್ಲ. ನಾವಿಬ್ಬರೂ ಪ್ರೀತಿಸುತ್ತಿದ್ದೆವು ಎಂದರೆ ಸರಿಯಲ್ಲ. ಈ ವಿಚಾರ ತಿಳಿದು ನನ್ನ ತಂದೆ ತಾಯಿ ನನ್ನನ್ನು ಚಾಸಾ-1 ರವರ ಮನೆಗೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ಆದರೂ ಕೂಡ ನಾವು ಸಂಪರ್ಕದಲ್ಲಿದ್ದೆವು ಎಂದರೆ ಸರಿಯಲ್ಲ. ಸದರಿ  ಕಾ.ಸಂ.ಒ.ಬಾಲಕನು ನಾವಿಬ್ಬರೂ ಓಡಿಹೋಗಿ ಮದುವೆಯಾಗೋಣ ಎಂದು ನನ್ನನ್ನು ಕರೆದನುಎಂದರೆ ಸರಿಯಲ್ಲ. ಅದರಂತೆ ನಾನು 1-12-20ರಂದು ಮಧ್ಯಾಹ್ನ 2-30 ಗಂಟೆಗೆ ಹೊಸದುರ್ಗಕ್ಕೆ ಹೋದೆನು ಅಲ್ಲಿ ಈತನು ನನ್ನನ್ನು ಕರೆದುಕೊಂಡು ಹೋದನು ಮತ್ತು ಈತನ ಜೊತೆ ಇದ್ದ ಇತರ 3 ಜನರು ಸೇರಿ ಯಲ್ಲಮ್ಮ ದೇವಸ್ಥಾನದಲ್ಲಿ ನಮ್ಮಿಬ್ಬರ ಮದುವೆ ಮಾಡಿಸಿದರು ಎಂದರೆ ಸರಿಯಲ್ಲ. ನಂತರ ಆತನು ನನ್ನನ್ನು ಆತನ ಚಿಕ್ಕಮ್ಮನ ಮನೆಗೆ ಕರೆದುಕೊಂಡು ಹೊದನು ಅಲ್ಲಿ ನನ್ನ ಜೊತೆ ದಿನನಿತ್ಯ ದೈಹಿಕ ಸಂಪರ್ಕ ಬೆಳೆಸುತ್ತಿದ್ದನು ಎಂದರೆ ಸರಿಯಲ್ಲ. ನಂತರ ಚಾಸ-1 ರಇವರು ದೂರು ಕೊಟ್ಟಿರುವ ವಿಚಾರ ತಿಳಿದು ಆತನು ನನ್ನನ್ನು ಅರಸೀಕೆರೆ ಠಾಣೆಗೆ ಕರೆತಂದು ಬಿಟ್ಟನು ಎಂದರೆ ಸರಿಯಲ್ಲ. ನಂತರ ನಾನು ನಿಪಿ-12 ರಂತೆ ಹೇಳಿಕೆ ಕೊಟ್ಟಿದ್ದೇನೆ ಮತ್ತು ಅದನ್ನು ಓದಿ ಸಹಿ ಹಾಕಿದ್ದು ಎಂದರೆ ಸರಿಯಲ್ಲ.

2.ನಂತರ ಪೊಲೀಸರು ನನ್ನನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗ ನಾನೇ ವೈದ್ಯರಿಗೆ ಮಾಹಿತಿ ನೀಡಿದೆನು ಅಲ್ಲಿ ನಿಪಿ-6ಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನಂತರ 18-12-20ರಂದು ಪೊಲೀಸರು ನನ್ನನ್ನು ಅರಸೀಕೆರೆ ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋದಾಗ ನಾನೇ ಹೇಳಿಕೆಯನ್ನು ಯಾರದೇ ಒತ್ತಾಯವಿಲ್ಲದೆ ನಿಪಿ-11 ರಂತೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 4-1-21ರಂದು ಪೊಲೀಸರು ಯಲ್ಲಮ್ಮ ದೇವಸ್ಥಾನ ಮತ್ತು ಸಿದ್ದಮ್ಮಳ ಮನೆ ಬಳಿ ಬಂದಿದ್ದರು ಅಲ್ಲಿ ನಾನೇ ಹಾಜರಿದ್ದು ಕೃತ್ಯಸ್ಥಳ ತೋರಿಸಿದೆನು, ಅಲ್ಲಿ ನಿಪಿ-7 ಮತ್ತು 8ರಂತೆ ಪೊಲೀಸರು ಮಹಜರು ಮಾಡಿ ನಿಪಿ-9, 10ರಂತೆ ಫೋಟೋ ತೆಗೆದರು ಎಂದರೆ ಸರಿಯಲ್ಲ. ದಿಃ18-12-20ರಂದು ನಾನು ಪೊಲೀಸರಿಗೆ ಈಗ ಓದಿ ಹೇಳಿದಂತೆ ಮರುಹೇಳಿಕೆ ಕೂಡ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಮರುಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು.

ಈಗ ನಾನು ಮತ್ತು ಕಾ.ಸಂ.ಒ.ಬಾಲಕ ಮದುವೆಯಾಗಿರುತ್ತೇವೆ ಎಂದರೆ ನಿಜ. ಆ ಕಾರಣದಿಂದ ಆರೋಪಿ ನಾನು ಅಪ್ರಾಪ್ತ ವಯಸ್ಕಳಾಗಿದ್ದಾಗ ನನ್ನನ್ನು ಅಪಹರಿಸಿಕೊಂಡು ಹೋಗಿ ನನ್ನ ಮೇಲೆ ದೈಹಿಕ ಸಂಪರ್ಕ ಬೆಳೆಸಿದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನಿಪಿ-6ರಿಂದ 13ನ್ನು FTSC No.1 ನ್ಯಾಯಾಲಯದಲ್ಲಿ ನಡೆದ ಸ್ಪೆಷಲ್ ಕೇಸ್ ನಂಬರ್ 102/21ರಿಂದ ತರಿಸಿಕೊಳ್ಳಲಾಗಿದೆ, ಇವುಗಳ ದೃಢೀಕೃತ ನಕಲುಗಳನ್ನು ಈ ಕಡತದಲ್ಲಿರಿಸಿ ಮೂಲ ದಾಖಲೆಗಳನ್ನು ಸದರಿ ಕಡತಕ್ಕೆ ಹಿಂದಿರುಗಿಸಲು ಸೂಚಿಸಲಾಗಿದೆ)

**ಪಾಟೀಸವಾಲುಃ ಕಾ.ಸಂ.ಒ.ಬಾಲಕನ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**